ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿಇ/ಶೈ.ಶಾ-4/ತರಬೇತಿ-2/2015-16 ದಿನಾಂಕ: 20.10.2015

## ಪರಿಷ್ಕೃತ ಜ್ಞಾಪನ

ವಿಷಯ: 2015-16ನೇ ಶೈಕ್ಷಣಿಕ ಸಾಲಿನಲ್ಲಿ ನಡೆಸಲಿರುವ ತರಬೇತಿ ಕಾರ್ಯಕ್ರಮಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಮತ್ತು ವಿಜ್ಞಾನ ವಿಷಯದ ಉಪನ್ಯಾಸಕರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶದ ಪತ್ರ ಸಂಖ್ಯೆ: ಇಡಿ 133 ಯೋಯೋಕ 2015, ಬೆಂಗಳೂರು, ದಿನಾಂಕ: 18-05-2015.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೈಸೂರು ವಿಭಾಗದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಣಿಜ್ಯ ಹಾಗೂ ವಿಜ್ಞಾನ ವಿಷಯದ ಉಪನ್ಯಾಸಕರುಗಳಿಗೆ ಕೆಳಗೆ ನೀಡಿರುವ ವೇಳಾಪಟ್ಟಿಯಲ್ಲಿನ ಸ್ಥಳಗಳಲ್ಲಿ ನಿಗಧಿಪಡಿಸಿರುವ ದಿನಾಂಕಗಳಂದು 04 ದಿನಗಳ ವಸತಿ ಸಹಿತ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಸಂಬಂಧಪಟ್ಟ ಉಪನ್ಯಾಸಕರನ್ನು ಕಾರ್ಯಾಗಾರಕ್ಕೆ ನಿಯೋಜಿಸಲು ಆದೇಶಿಸಿದೆ.

**MYSORE DIVISION :** 1. Mysore (NN) 2.Chikkamagalur(HH), 3. Hassan (LL), 4. Chamarajnagar (NC), 5. Madikeri (VV) 6. Mandya (PP), 7.Mangalore (SS), 8.Udupi (SU).

| PHYSICS(258) | CHEMISTRY(272) | MATHEMATICS(236) |
|---|---|---|
| Date: 04-11-2015 to 07-11-2015.<br>**Venue:**<br>**Alva's PU College, Moodbidre Tq, Mangalore. 9448915155**<br>**Mangalore DDPU-9449422487**<br>State Co-oridinatar :<br>**Sri Narayanappa 9448573532**<br>Div. Co- ordinator:-<br>**Sri Anand** | Date:: 04-11-2015 to 07-11-2015.<br>**Venue:**<br>**SDM P U College, Ujjare, Beltangadi Mangalore -57424 9480015625**<br>**Mangalore DDPU-9449422487**<br>State Co-oridinatar :<br>**Dr. Eregowda 9844316387**<br>Div. Co- ordinator:-<br>**Sri N.K.Suresh 8453648846** | Date:: 04-11-2015 to 07-11-2015.<br>**Venue:**<br>**Pana pu college, Kenjar,Bajpe, Mangalore Tq.DK**<br>**Principal: 8861484488**<br>**Mangalore DDPU-9449422487**<br>State Co-oridinatar :<br>**Sri Giridhar Ganachari 9845033794**<br>Div. Co- ordinator:-<br>**Sri Lilabhai Bhat 9480531185** |

ಸೂಚನೆ:- *ದಿನಾಂಕ 04-11-2015 ರಂದು ಬೆಳಗ್ಗೆ 7.30ಕ್ಕೆ ಪಿವಿಎಸ್ ವೃತ್ತ ಕೋಡಿಯಾಲಬೈಲದಿಂದ ಪನಾ ಪದವಿ ಪೂರ್ವ ಕಾಲೇಜಿಗೆ ತೆರಳಲು ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.*

- ತರಬೇತಿ ಕಾರ್ಯಕ್ರಮಕ್ಕೆ ಉಪನ್ಯಾಸಕರನ್ನು ನಿಯೋಜಿಸಿ ಕರ್ತವ್ಯದಿಂದ ಬಿಡುಗಡೆ ಮಾಡಲು ಸಂಬಂಧಿಸಿದ ಪ್ರಾಂಶುಪಾಲರುಗಳಿಗೆ ಕೂಡಲೇ ತಿಳಿಸುವುದು.
- ಕಾರ್ಯಕ್ರಮದಲ್ಲಿ ಭಾಗವಹಿಸುವ ಉಪನ್ಯಾಸಕರು ಕಾಲೇಜಿನ ಪ್ರಾಂಶುಪಾಲರಿಂದ ಕಾಲೇಜಿನ ಕರ್ತವ್ಯದಿಂದ ಬಿಡುಗಡೆ ಮಾಡಿಸಿಕೊಂಡು, ಬಿಡುಗಡೆ ಪತ್ರವನ್ನು ತರುವುದು.
- ನಿಗಧಿಪಡಿಸಿರುವ ದಿನಾಂಕಗಳಂದು ತರಬೇತಿ ಕಾರ್ಯಾಗಾರಕ್ಕೆ ಸಂಬಂಧಪಟ್ಟ ಉಪನ್ಯಾಸಕರುಗಳು ತಪ್ಪದೇ ಹಾಜರಾಗತಕ್ಕದ್ದು.
- ತರಬೇತಿಗೆ ಗೈರು ಹಾಜರಾಗುವ ಉಪನ್ಯಾಸಕರುಗಳ ವಿರುದ್ಧ ಶಿಸ್ತು ಕ್ರಮ ಜರಗಿಸಲಾಗುವುದು.

- ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಉಪನ್ಯಾಸಕರು ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪಠ್ಯಪುಸ್ತಕಗಳನ್ನು ಕಡ್ಡಾಯವಾಗಿ ತರುವುದು.
- ಈ ಹಿಂದೆ ನಡೆದ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಕಡ್ಡಾಯವಾಗಿ ತರುವುದು.
- ತರಬೇತಿ ಕಾರ್ಯಕ್ರಮವನ್ನು ನಡೆಸಲು ಅಗತ್ಯವಿರುವ ಮೊತ್ತವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಸಂಚಿತ ನಿಧಿಯಿಂದ ಪಡೆದು ಬಳಸಿಕೊಳ್ಳುವುದು. ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿದ ಕೂಡಲೇ ಅದನ್ನು ಸಂಬಂಧಿಸಿದ ಪ್ರಾಂಶುಪಾಲರಿಗೆ ನಿಯಮಾನುಸಾರ ಹಿಂದಿರುಗಿಸುವುದು.
- ತರಬೇತಿಗೆ ನಿಯೋಜನೆಗೊಂಡ ಉಪನ್ಯಾಸಕರುಗಳು KCSRನಿಯಮಾನುಸಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು (ಇದು ವಸತಿ ಸಹಿತ ತರಬೇತಿ ಆಗಿರುವುದರಿಂದ 1/4 DA) ಪಡೆಯಲು ಅರ್ಹರಿರುತ್ತಾರೆ.

(ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

ಜಂಟಿ ನಿರ್ದೇಶಕರು(ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಉಪ ನಿರ್ದೇಶಕರು:- ಮೈಸೂರು, ಚಿಕ್ಕಮಗಳೂರು, ಹಾಸನ, ಚಾಮರಾಜನಗರ, ಮಡಿಕೇರಿ, ಮಂಡ್ಯ, ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿನ ತರಬೇತಿ ನಿಯೋಜಿಸಲ್ಪಟ್ಟ ಉಪನ್ಯಾಸಕರನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ತಿಳಿಸಲು ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಲೆಕ್ಕಾಧಿಕಾರಿಗಳು, ಲೆಕ್ಕ ಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಅಂತರಜಾಲದಲ್ಲಿ ಅಳವಡಿಸಲು.

ಪ್ರತಿಗಳನ್ನು ಮಾಹಿತಿಗಾಗಿ :

4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ನಿರ್ದೇಶಕರ ಆಪ್ತಶಾಖೆ.
6. ಕಛೇರಿ ಪ್ರತಿ.